5 ನಾನು ಬರೆದದ್ದು ರೆಕಾರ್ಡ್ ಆಗಿ ಮತ್ತೆ ನನ್ನಲ್ಲಿಗೆ ಬರುತ್ತದೆ. ಅದನ್ನು ಕೇಳಿ ಖುಷಿಯಾಗುತ್ತದೆ. ವಾಸ್ತವವಾಗಿ ಅದಾಗಬಾರದು. ನಾನು ಎಲ್ಲೋ ಹೋಗ್ತಾ ಇರ್ತಿವಿ. ಏನೋ ಮಾಡ್ತಾ ಇರ್ತಿವಿ. ಇನ್ನೊಬ್ಬರು ಯಾರೋ ನಮ್ಮ ಹಾಡನ್ನು ಕೇಳ್ತಾ ಇರೋದು ಹಾಗೂ ಆನಂದಿಸುತ್ತಿರೋದು ನನ್ನ ಕಿವಿಗೆ ಕೇಳಬೇಕು, ಕಣ್ಣಿಗೆ ಕಾಣಬೇಕು. ಅದು ನನ್ನ ಪ್ರಕಾರ ನಿಜವಾದ ಸಾರ್ಥಕತೆ. ಕೆಲ ತಾಯಂದಿರು ಎದುರಾಗಿ 'ಸಾರ್, ನನ್ ಮಗ ನಿಮ್ ಹಾಡು ಕೇಳದೆ ಊಟ ಮಾಡೋಲ್ಲ. ನಿಮ್ ಹಾಡು ಕೇಳ್ತಾ ಇನ್ನೂ ನಾಲ್ಕೈದು ತುತ್ತು ಜಾಸ್ತಿ ತಿನ್ತಾನೆ' ಎನ್ನುತ್ತಾರಲ್ಲ ಅದು ನನಗೆ ಬಹಳ ಸಾರ್ಥಕ ಅನಿಸುತ್ತದೆ.

ನನ್ನ ಮೊದಲ ಸಿನಿಮಾ ಹಾಡು, 'ನನ್ನಲಿ ನಾನಿಲ್ಲ, ಮನದಲ್ಲಿ ನೀನಿಲ್ಲ'. ಅದರಲ್ಲಿ 'ನಾ ಹೇಳಬೇಕೆ ನೀ ಹೇಳಬೇಕೆ ಯಾರಾದರೇನು ಹೇಳಬಾರದೆ' ಅನ್ನೋ ಸಾಲಿದೆ. ಆ ಹಾಡು ಹಿಟ್ ಆದ ಬಳಿಕ ಇಬ್ಬರು ಪ್ರೇಮಿಗಳು (ವಕೀಲರು) ನನ್ನನ್ನು ಭೇಟಿಯಾಗಿದ್ದರು. 'ಸರ್, ನಾವಿಬ್ಬರು ತುಂಬಾ ವರ್ಷಗಳಿಂದ ಸ್ನೇಹಿತರು. ಸ್ನೇಹ ಪ್ರೀತಿಗೆ ಪರಿವರ್ತನೆ ಆಗಿದೆ. ಬಟ್ ಹೇಳಿಕೊಳ್ಳೋಕೆ ಇಬ್ರಿಗೆ ಸಂಕೋಚ ಆಗಿತ್ತು. ವರ್ಷಾನುಗಟ್ಟಲೆ ಹೇಳಿರಲಿಲ್ಲ. ಪ್ರೀತಿ ಮಾಡುತ್ತಿರುವುದು ಇಬ್ಬರಿಗೂ ಗೊತ್ತು. ಆದರೆ, ನಿಮ್ಮ ಹಾಡು ಕೇಳಿದ ಬಳಿಕ ಧೈರ್ಯ ಬಂದು ನಾನೇ ಈಕೆಗೆ ಪ್ರಪೋಸ್ ಮಾಡಿದೆ' ಎಂದ ಆ ಪ್ರೇಮಿ. ಅದೇ ಖುಷಿಗೆ ಅವರಿಬ್ಬರೂ ನನಗೆ ಐಸ್‌ಕ್ರೀಮ್ ಪಾರ್ಟಿ ಕೊಡಿಸಿದ್ದರು. ಅದು ಜೀವನದಲ್ಲಿ ಮರೆಯಲಾರದ ವಿಚಾರ.

6 ಅತ್ಯುತ್ತಮ ಹಾಡೆಂದರೆ 'ಕುಲದಲ್ಲಿ ಕೀಳ್ಯಾವುದೋ ಹುಚ್ಚಪ್ಪ'. ಎಷ್ಟೊ ಧರ್ಮಗ್ರಂಥಗಳನ್ನು ಓದಿ ಅರ್ಥವಾಗುವಂತಹ ಸಾರವನ್ನು ಆ ಒಂದು ಹಾಡಿನ ಮೂಲಕ ಹೇಳಲಾಗಿದೆ. ಆ ಹಾಡು ಮಾನವೀಯತೆಯನ್ನು ಇಂದಿಗೂ ಸಾರುತ್ತಿದೆ. ಕೇಳಿದಾಗಲೆಲ್ಲ ಸಾಮಾಜಿಕ ಜಾಗೃತಿ ಮೂಡುತ್ತಿದೆ. ಮಾನವೀಯತೆಯನ್ನು ಮನದಲ್ಲಿ ಬಿತ್ತುತ್ತದೆ. ಮೇಲೂ ಕೀಳು ಇಲ್ಲ ಎಂಬ ಜೀವನದ ದೊಡ್ಡ ತತ್ವವನ್ನು ರಂಜನಿಯವಾಗಿ ತಿಳಿಸಿದೆ. ಅಂದಿನ ಕಾಲದಲ್ಲಿ ಎಷ್ಟು ಜನಪ್ರಿಯವಾಗಿತ್ತೋ ಇಂದಿಗೂ ಅಷ್ಟೇ ಜನಪ್ರಿಯವಾಗಿದೆ. ನನಗೆ ಸಿನಿಮಾ ಎಂಬುದು ಜನ ಸಾಮಾನ್ಯರ ಮಾಧ್ಯಮ. ಜನಸಾಮಾನ್ಯರಿಗೆ ಮುಟ್ಟಬೇಕು ಆಗಲೇ ಅದು ಸಾರ್ಥಕತೆ.

7 ನಾಗೇಂದ್ರ ಪ್ರಸಾದ್, ಜಯಂತ್ ಕಾಯ್ಕಿಣಿ, ಯೋಗರಾಜ್ ಭಟ್, ಕಲ್ಯಾಣ್ ಇವರೆಲ್ಲರೂ ಮುಖ್ಯ ಅನಿಸುತ್ತಾರೆ. ಅವರದ್ದೇ ಶೈಲಿಯ ಮೂಲಕ ಗುರುತಿಸಿಕೊಂಡಿದ್ದಾರೆ. ಅಲ್ಲದೇ ಅವರೆಲ್ಲರೂ ದೊಡ್ಡ ಅಭಿಮಾನಿ ಬಳಗ ಹೊಂದಿದ್ದಾರೆ.

8 ಜಾಸ್ತಿ ಇಲ್ಲ, ಬಟ್ ಇದೆ. ಇನ್ನೊಂದ್ ಚೂರು ಈ ಸಾಲುಗಳನ್ನು ಬೆಟರ್ ಆಗಿ ಬರೆಯಬಹುದಿತ್ತು ಅನಿಸಿದ್ದಿದೆ. ಒತ್ತಡ ಹಾಗೂ ಬೇಗ ಕೊಡಬೇಕಾದ ಅನಿವಾರ್ಯ ಸಂದರ್ಭಗಳಲ್ಲಿ ಹಾಗೆ ಅನಿಸಿದ್ದಿದೆ. ಒಂದು ಹಾಡನ್ನು ಮತ್ತ್ಯಾವಗೋ ಕೇಳಿದಾಗ ಅಯ್ಯಯ್ಯೋ ಈ ಸಾಲುಗಳನ್ನು ಬೇರೆ ರೀತಿ ಬರೆಯಬಹುದಿತ್ತು ಅನಿಸಿದ್ದುಂಟು. ಅವಕಾಶ ಇದ್ದಾಗ ಬದಲಾಣೆ ಮಾಡಿದ್ದೇವೆ. ಆದರೆ, ಕಡಿಮೆ.